# ಸೋಹಾ ನೀಡಿದ ಶಾಕ್!

ಬಿ-ಟೌನಿನ ದೀರ್ಘಕಾಲದ ಪ್ರೇಮಿಗಳ ಪೈಕಿ ಒಂದಾದ ಸೋಹಾ ಅಲಿ ಖಾನ್ ಮತ್ತು ಕುನಾಲ್ ಖೇಮು ಜೋಡಿ ಸಿನಿ ಪ್ರಿಯರಿಗೆ ಮಾತ್ರವಲ್ಲ, ನವಾಬ್ ಕುಟುಂಬಕ್ಕೂ ಶಾಕ್ ನೀಡಿದೆ. ಇಬ್ಬರ ಪ್ರೇಮ ಗುಟ್ಟೇನಲ್ಲ. ಸಾರ್ವಜನಿಕವಾಗಿ ಸುತ್ತಾಡುತ್ತಿದ್ದವರು, ಮದುವೆ ಬಗ್ಗೆ ಮಾತನಾಡುತ್ತಿದ್ದವರು, ತಮ್ಮ ಕುರಿತ ಗಾಸಿಪ್‌ಗಳಿಗೆ ತಲೆಕೆಡಿಸಿಕೊಂಡಿರಲೇ ಇಲ್ಲ. ಈಗ ಇಬ್ಬರೂ ಮನೆಯವರಿಗೂ ಹೇಳದೆ ಈಗ ನಿಶ್ಚಿತಾರ್ಥವನ್ನೂ ಮಾಡಿಕೊಂಡಿದ್ದಾರೆ. ಅದೂ ಪ್ಯಾರಿಸ್‌ನಲ್ಲಿ.

ಇದು ಸ್ವತಃ ಸೋಹಾಗೂ ಅಚ್ಚರಿ ಮೂಡಿಸಿದೆಯಂತೆ. ಪ್ಯಾರಿಸ್‌ನಲ್ಲಿ ಸುತ್ತಾಡುವಾಗ ಕುನಾಲ್ ಮದುವೆಯ ನಿವೇದನೆಯನ್ನು ಸೋಹಾರ ಮುಂದಿಟ್ಟರಂತೆ. ಸೋಹಾ ಕೂಡಲೇ 'ಎಸ್' ಎಂದು ಪ್ರತಿಕ್ರಿಯಿಸಿದರಂತೆ. ಅಲ್ಲಿಯೇ ಇಬ್ಬರು ಉಂಗುರ ಬದಲಿಸಿಕೊಂಡು ಮದುವೆಗೂ ಸಿದ್ಧತೆ ನಡೆಸಿದ್ದಾರೆ. ಇದನ್ನೆಲ್ಲಾ ಸೋಹಾ ತಮ್ಮ ಟ್ವಿಟ್ಟರ್ ಖಾತೆಯಲ್ಲಿ ಹಂಚಿಕೊಂಡ ನಂತರವಷ್ಟೇ ಅವರ ಸಂಬಂಧಿಗಳು ಮತ್ತು ಆತ್ಮೀಯರ ವಲಯಕ್ಕೆ ಗೊತ್ತಾಗಿದ್ದು.

ಈ ಜೋಡಿ ಸ್ವದೇಶಕ್ಕೆ ಮರಳಿದ ಕೂಡಲೇ ಆಪ್ತೇಷ್ಟರಿಗೆ ವಿಶೇಷ ಔತಣ ಕೂಟ ಏರ್ಪಡಿಸಲು ಕುಟುಂಬದವರು ಸಿದ್ಧತೆ ನಡೆಸಿದ್ದಾರೆ. ಸೋಹಾರ ಅತ್ತಿಗೆ ಕರೀನಾ ಕಪೂರ್ ಕೊನೆಗೂ ಸೋಹಾ ಮದುವೆಗೆ ಮುಂದಾಗಿರುವುದು ಖುಷಿ ತಂದಿದೆ ಎಂದು ಹೇಳಿಕೊಂಡಿದ್ದಾರೆ. ಪ್ಯಾರಿಸ್‌ಗೆಂದು ಸುತ್ತಾಟಕ್ಕೆ ಹೋದವರು ಹೇಳದೇ ಕೇಳದೇ ಮದುವೆ ಘೋಷಿಸಿದ್ದಾರೆ. ಸ್ವದೇಶಕ್ಕೆ ಮರಳಿದ ಬಳಿಕವೇ ಮದುವೆಯಾಗುತ್ತಾರೋ ಅಥವಾ ಮದುವೆಯಾಗಿ ಟ್ವಿಟ್ಟರ್‌ನಲ್ಲಿ ವಿಷಯ ತಿಳಿಸುತ್ತಾರೋ ಎಂಬ ಆತಂಕ ಈ ಪ್ರೇಮಿಗಳ ಕುಟುಂಬದವರದು.




# ಹೃತಿಕ್- ಸೂಸನ್ ಬೇರಾದದ್ದು ಏಕೆ?

ಎಲ್ಲರ ಕಣ್ಣು ಕುಕ್ಕುವಂತಿದ್ದ ಹೃತಿಕ್ ರೋಷನ್ ಮತ್ತು ಸೂಸನ್ ಮುದ್ದಾದ ಜೋಡಿ ದೂರಾಗಿ ಹಲವು ಮಾಸಗಳು ಕಳೆದಿವೆ. ಆದರೆ ಇಬ್ಬರ ಬೇರ್ಪಡುವಿಕೆಗೆ ಕಾರಣ ಏನೆಂಬ ಪ್ರಶ್ನೆ ಅಭಿಮಾನಿಗಳಲ್ಲಿ ಇನ್ನೂ ಕಾಡುತ್ತಿದೆ. ಆ ಪ್ರಶ್ನೆಗಳಿಗೆ ಈಗ ಅಧಿಕೃತ ಉತ್ತರವೂ ದೊರೆತಿದೆ. ವಿಚ್ಛೇದನಕ್ಕೆ ಸಾಮಾನ್ಯವಾಗಿ ಕಾರಣವಾಗುವ ಅಂಶಗಳೇ ಹೃತಿಕ್ ಮತ್ತು ಸೂಸನ್ ನಡುವೆ ವಿರಸ ಏರ್ಪಡಲು ಕಾರಣ. ಇಬ್ಬರೂ ಮಹಾನ್ ವೃತ್ತಿಪರರು. ವೃತ್ತಿಗೆ ಬದ್ಧರಾಗಿರುವ ಸಲುವಾಗಿ ತಮ್ಮ ವೈಯಕ್ತಿಕ ಬದುಕನ್ನು ಸಹ ಮರೆಯುವವರು. ಆ ವೃತ್ತಿಪರತೆಯೇ ಇಬ್ಬರ ಬಾಂಧವ್ಯಕ್ಕೆ ಮುಳುವಾಗಿದ್ದು. ಒಬ್ಬರಿಗೊಬ್ಬರು ಸಮಯ ಮೀಸಲಿಡಲು ಸಾಧ್ಯವಾಗದಷ್ಟು ಬಿಜಿ ಜೀವನ ಇಬ್ಬರದ್ದು. ತಮ್ಮೊಳಗಿನ ಸಮಸ್ಯೆಗಳು ಹಲವು ಬಾರಿ ಕೌನ್ಸೆಲಿಂಗ್‌ಗೆ ಒಳಪಟ್ಟ ಬಳಿಕ ಅವರಿಗೆ ಅರ್ಥವಾಗಿದೆ. ಮುದ್ದಾದ ಮಕ್ಕಳಿದ್ದರೂ, ಪ್ರೀತಿಯಿದ್ದರೂ ಎಲ್ಲವೂ ತಾಳೆಯಾಗುತ್ತಿಲ್ಲ ಎಂಬ ನೋವು ಇಬ್ಬರನ್ನೂ ಕಾಡಿದೆ. ಅದಕ್ಕಾಗಿಯೇ ಹಲವಾರು ಪ್ರಸಿದ್ಧ ಆಪ್ತ ಸಲಹಾಗಾರರನ್ನು ಸಂಪರ್ಕಿಸಿದ್ದಾರೆ. ಕುಳಿತು ಮಾತನಾಡಿದ್ದಾರೆ. ಆದರೆ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಸಾಧ್ಯವಾಗಿಲ್ಲ. ಕೊನೆಗೆ ವಿಧಿಯಿಲ್ಲದೆ ವಿಚ್ಛೇದನಕ್ಕೆ ಮುಂದಾಗಿದ್ದಾರೆ ಎಂದಿದ್ದಾರೆ ವಿಚ್ಛೇದನದ ಅನೇಕ ಪ್ರಕರಣಗಳನ್ನು ನಡೆಸಿರುವ ವಕೀಲೆ ಮೃಣಾಲಿ ದೇಶ್‌ಮುಖ್.




ಅವರ ಪ್ರಕಾರ ಬಾಲಿವುಡ್‌ನಲ್ಲಿ ವಿಚ್ಛೇದನಗಳು ಹೆಚ್ಚಾಗಲು ಮುಖ್ಯ ಕಾರಣ ಒತ್ತಡ! ವಂಚನೆ, ವಿವಾಹಯೇತರ ಸಂಬಂಧಗಳು ನಂತರದ ಸ್ಥಾನದಲ್ಲಿವೆ. ಮಿಗಿಲಾಗಿ, ಸೆಲೆಬ್ರಿಟಿಗಳಲ್ಲಿ ಸಂಗತಿಗಳನ್ನು ಅರ್ಥ ಮಾಡಿಕೊಂಡು ಅದಕ್ಕೆ ಪೂರಕವಾಗಿ ವರ್ತಿಸುವ ಸಾಮರ್ಥ್ಯವೇ ಇರುವುದಿಲ್ಲ. ಹೃತಿಕ್–ಸೂಸನ್ ವಿಚ್ಛೇದನ ಮಾತ್ರವಲ್ಲ, ಮೃಣಾಲಿ ಅವರು ಅಮೀರ್ ಖಾನ್–ರೀನಾ ದತ್ತಾ, ಆದಿತ್ಯ ಚೋಪ್ರಾ–ಪಾಯಲ್ ಚೋಪ್ರಾ, ಕರಿಷ್ಮಾ ಕಪೂರ್–ಸಂಜಯ್ ಕಪೂರ್, ಲಿಯಾಂಡರ್ ಪೇಸ್–ರೆಹಾ ಪಿಳ್ಳೈರಂಥ ಸೆಲೆಬ್ರಿಟಿಗಳ ವಿಚ್ಛೇದನ ಪ್ರಕರಣಗಳನ್ನೂ ನಿಭಾಯಿಸಿದವರು.

ಅಂದ ಹಾಗೆ, ಹೃತಿಕ್–ಸೂಸಾನ್ ಇಬ್ಬರೂ ದೂರಾಗಲೂ ನಿಶ್ಚಯಿಸಿದ್ದರೂ, ಮನಸು ಬದಲಿಸಲು ಅವರಿಗೆ ಅಕ್ಟೋಬರ್‌ವರೆಗೂ ಸಮಯವಿದೆ. ಹಾಗೆಂದು ಕೋರ್ಟ್ ಹೇಳಿದೆ. ಹಾಗೆ ಆಗಿ ಇಬ್ಬರೂ ಮತ್ತೆ ಸೇರಬೇಕು ಎನ್ನುವುದು ಮೃಣಾಲಿ ಆಶಯ. ಹೃತಿಕ್ ಅಭಿಮಾನಿಗಳ ಆಶಯವೂ ಅದೇ ಅಲ್ಲವೇ?

■ ಅಮಿ